2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ
ಚಿಕ್ಕಮಗಳೂರು

ಸತ್ರ ಮೊಕದ್ದಮೆ ನಂಃ 121/2014

| | | | |
|---|---|---|---|
| ಸಾಕ್ಷಿದಾರರ ಹೆಸರು | - | ಉಮರ್ ಫಾರೂಕ್ | ಪಿಡಬ್ಲ್ಯೂ - 1 |
| ತಂದೆಯ ಹೆಸರು | - | ಅಹಮದ್ ಬಾವಾ | ಸಿಡಬ್ಲ್ಯೂ -1 |
| ವಯಸ್ಸು | - | 37 ವರ್ಷ | |
| ಉದ್ಯೋಗ | - | ಕೂಲಿ ಕೆಲಸ | |
| ವಾಸ ಸ್ಥಳ | - | ಪಂಚಾಯತ್ ಗುಡ್ಡೆ, ಜೋಕಟ್ಟೆ ಮಂಗಳೂರು | |

(ಈ ದಿನ ಆರೋಪಿ ನ್ಯಾಯಾಲಯಕ್ಕೆ ಗೈರು ಹಾಜರಿದ್ದು ಆರೋಪಿ ಪರ ವಕೀಲರು ವಿನಾಯಿತಿ ಅರ್ಜಿ ಸಲ್ಲಿಸಿರುತ್ತಾರೆ ಮತ್ತು ಆರೋಪಿಯನ್ನು ಗುರುತಿಸುವಿಕೆಯ ಬಗ್ಗೆ ಯಾವುದೇ ತಕರಾರು ಇಲ್ಲವೆಂದು ತಿಳಿಸಿರುತ್ತಾರೆ ಹಾಗಾಗಿ ಆರೋಪಿಯ ಗೈರು ಹಾಜರಿಯಲ್ಲಿ ಸಾಕ್ಷಿಯ ವಿಚಾರಣೆಯನ್ನು ನಡೆಸಲಾಯಿತು.)

ದಿನಾಂಕಃ 22.09.2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ-

1. ಚಾಸಾ.2 ರಿಂದ 4, 6, 7, 8, 9, 10 ರವರು ನನ್ನ ಸ್ನೇಹಿತರು. ಚಾಸಾ.5 ರವರು ಚಾಸಾ.4 ರವರ ತಂದೆ. ಆರೋಪಿ ಗೊತ್ತು. ಆತನನ್ನು ತನಿಕೋಡ್ ಚೆಕ್ ಪೋಸ್ಟಿನಲ್ಲಿ ನೋಡಿದ್ದೇನೆ.
2. ಈಗ್ಗೆ 9 ವರ್ಷಗಳ ಹಿಂದೆ ಅಂದರೆ ದಿನಾಂಕ 19.04.2014 ರಂದು ನಾನು, ರಫೀಕ್, ಕಬೀರ್, ಪ್ರಮೋದ್, ಸರ್ಫರಾಜ್ ರವರು ಪಿಕ್ ಅಪ್ ವಾಹನದಲ್ಲಿ ಹೊಸೂರಿನ

ಆಗುಂಬೆಗೆ ರಾತ್ರಿ 1.30 ಗಂಟೆಗೆ ದನಗಳನ್ನು ಲೋಡ್ ಮಾಡಲು ಹೋಗಿದ್ದೆವು. ಆಗ ನಾವು 20 ದನಗಳನ್ನು ಹೈದರ್ ಎಂಬುವವರ ಕಡೆಯಿಂದ ಕೊಂಡುಕೊಂಡು ವಾಹನಕ್ಕೆ ಲೋಡ್ ಮಾಡಿಕೊಂಡು ಶೃಂಗೇರಿಯ ತನಿಕೋಡ್ ಚೆಕ್ ಪೋಸ್ಟ್ ಹತ್ತಿರ ಬರುತ್ತಿದ್ದೆವು. ಆಗ ಚೆಕ್ ಪೋಸ್ಟಿನ ಗೇಟು ಹಾಕಲಾಗಿತ್ತು. ಆಗ ರಫೀಕ್ ಗೇಟ್ ಪಾಸನ್ನು ತೆಗೆದುಕೊಳ್ಳಲು ಹೋದನು. ಅಲ್ಲಿ ANF (Anti Nuxalite Force) ಇದ್ದರು. ಅವರು ವಾಹನದಲ್ಲಿ ಏನು ಲೋಡು ಇದೆ ಎಂದು ಕೇಳಿದರು. ಆಗ ಕಬೀರ್ ದನಗಳು ಇರುವುದಾಗಿ ತಿಳಿಸಿದರು. ಆಗ ಆರೋಪಿ ನವೀನ್ ನಾಯಕ್ ಬಯ್ಯಲು ಪ್ರಾರಂಭಿಸಿದನು. ನಮ್ಮ ತಂದೆ ತಾಯಿಗೆ ಬೈದನು ಮತ್ತು ಮುಸಲ್ಮಾನರು ಎಂದು ಬೈದನು. ಆಗ ಕಬೀರ್ ಆರೋಪಿಯನ್ನು ಕುರಿತು ನಮ್ಮ ತಂದೆ ತಾಯಿಗೆ ಬಯ್ಯಬೇಡಿ ಎಂದು ಹೇಳಿದನು. ಆಗ ನವೀನ್ ನಾಯಕ್ ಕಬೀರನನ್ನು ದೂಡಿದನು. ನಂತರ ನವೀನ್ ನಾಯಕ್ ಕಬೀರನ ಬೆನ್ನಿಗೆ ರೈಫಲ್ ನಿಂದ ಶೂಟ್ ಮಾಡಿದನು. ಆಗ ಕಬೀರ್ ಕೆಳಗೆ ಬಿದ್ದು ಸ್ಥಳದಲ್ಲಿಯೇ ಮೃತಪಟ್ಟನು. ಆಗ ರಫೀಕ್, ಪ್ರಮೋದ್, ಸರ್ಫರಾಜ್ ಅಲ್ಲಿಂದ ಓಡಿ ಹೋದರು. ಅಲ್ಲಿದ್ದ ಪೊಲೀಸ್ ಸಿಬ್ಬಂದಿ ನನ್ನನ್ನು ಹಿಡಿದುಕೊಂಡು ಶೃಂಗೇರಿ ಪೊಲೀಸ್ ಠಾಣೆಗೆ ಕರೆದುಕೊಂಡು ಹೋದರು. ಎರಡು ದಿನಗಳ ಬಳಿಕ ಅಂದರೆ ದಿನಾಂಕ 21.04.2014 ರಂದು ನಮ್ಮ ಕುಟುಂಬದವರು ಅಲ್ಲಿಗೆ ಬಂದು ನನ್ನನ್ನು ಕರೆದುಕೊಂಡು ಹೋದರು. ನಂತರ ದಿನಾಂಕ 23.04.2014 ರಂದು ನಾನು,

ರಿಯಾಜ್ ಶೃಂಗೇರಿ ಪೊಲೀಸ್ ಠಾಣೆಗೆ ಹೋದೆವು. ಅಲ್ಲಿ ರಿಯಾಜ್ ನಾನು ಹೇಳಿದಂತೆ ದೂರನ್ನು ಬರೆದುಕೊಟ್ಟನು. ಅದಕ್ಕೆ ನಾನು ಸಹಿ ಮಾಡಿ ಪೊಲೀಸರಿಗೆ ಕೊಟ್ಟಿದ್ದೇನೆ. ಸದರಿ ದೂರಿನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ದೂರು ಮತ್ತು ಅದರಲ್ಲಿರುವ ತನ್ನ ಸಹಿಗಳನ್ನು ನೋಡಿ ಗುರುತಿಸಿದ ಮೇರೆಗೆ ದೂರನ್ನು ನಿಪಿ.1 ಎಂದು ಅದರಲ್ಲಿರುವ ಸಾಕ್ಷಿಯ ಸಹಿಗಳನ್ನು ನಿಪಿ.1(ಎ) ರಿಂದ ನಿಪಿ.1(ಸಿ) ಎಂದು ಗುರುತಿಸಲಾಯಿತು.

3. ಸಾಕ್ಷಿಯು ಪ್ರಥಮ ವರ್ತಮಾನ ವರದಿಯ ಕಲಂ 12 ರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಸದರಿ ಪ್ರಥಮ ವರ್ತಮಾನ ವರದಿಯನ್ನು ನಿಪಿ.2 ಎಂದು, ಸಾಕ್ಷಿಯ ಸಹಿಯನ್ನು ನಿಪಿ.2(ಎ) ಎಂದು ಗುರುತಿಸಲಾಯಿತು.

4. ದಿನಾಂಕ 25.04.2014 ರಂದು ತನಿಕೋಡು ಚೆಕ್ ಪೋಸ್ಟ್ ಬಳಿ ಪೊಲೀಸರು ಮಹಜರ್ ಗಾಗಿ ಬಂದಿದ್ದರು. ಅಲ್ಲಿ ನಾನು ಪೊಲೀಸರಿಗೆ ನವೀನ್ ನಾಯಕ ಕಬೀರನಿಗೆ ಶೂಟ್ ಮಾಡಿದ್ದರಿಂದ ಆತ ಬಿದ್ದು ಮೃತಪಟ್ಟ ಸ್ಥಳವನ್ನು ತೋರಿಸಿದೆನು. ಸದರಿ ಸ್ಥಳದಲ್ಲಿ ಪೊಲೀಸರು ಮಹಜರ್ ಮಾಡಿಕೊಂಡು ನನ್ನ ಸಹಿಯನ್ನು ಪಡೆದುಕೊಂಡರು. ಆ ಸಮಯಕ್ಕೆ ನನ್ನ ಜೊತೆ ಪೊಲೀಸರು, ರಿಯಾಜ್ ಮತ್ತು ಇನ್ನು ಇಬ್ಬರು ವ್ಯಕ್ತಿಗಳು ಇದ್ದರು. ಅವರು ಸಹ ಮಹಜರ್ ಗೆ ಸಹಿ ಮಾಡಿದ್ದಾರೆ. ಸದರಿ ಮಹಜರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು

ಮಹಜರ್ ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಮಹಜರನ್ನು ನಿಪಿ.3 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.3(ಎ) ಎಂದು ಗುರುತಿಸಲಾಯಿತು.

5. ಘಟನಾ ಸಮಯದಲ್ಲಿ ಆರೋಪಿ ನವೀನ್ ನಾಯಕ್ ಕಬೀರನಿಗೆ ಶೂಟ್ ಮಾಡಿದ ರೈಫಲನ್ನು ನೋಡಿದರೆ ಗುರುತಿಸುತ್ತೇನೆ.

(ಈ ಹಂತದಲ್ಲಿ ವಿಶೇಷ ಸರ್ಕಾರಿ ಅಭಿಯೋಜಕರ ವಿನಂತಿಯ ಮೇರೆಗೆ ಸಾಕ್ಷಿಯ ಮುಂದಿನ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು. )

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ

ಹೇಮಾ.